ಓ.ಎಸ್.76/2016 ಡಿ.ಡಬ್ಲು-1
*ಗದ್ದೇಪ್ಪ ತಂದೆ ಬಸಪ್ಪ ಪೂಜಾರಿ*

ದಿ.18-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಂದುವರೆದ ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ :-***

ದುರಗಯ್ಯನಿಂದ ಬನ್ನಯ್ಯನಿಗೆ ಹಕ್ಕು ದಾಖಲೆ ಆದ ಬಗ್ಗೆ ತಮಗೆ ಮಾಹಿತಿ ಇದೇಯಾ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆ ಸ್ವತ್ತು ಎಲ್ಲಿ ಬರುತ್ತದೆ ಮತ್ತು ಅದರ ಅಳತೆ ಮಾಡಿಸಿರುತ್ತಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-5 ರಲ್ಲಿ ಸ.ನಂ: 165/2/ಆ 1 ರಂತೆ ಅನುಕ್ರಮ ಸಂಖ್ಯೆ : 15 ಮತ್ತು 16 ರಲ್ಲಿನ ಬರೆದ ಷರಾವನ್ನು ಓದಿ ಹೇಳಲಾಗಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ಎಕರೆ 30 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಿಮ್ಮ ಹೆಸರಿಗೆ ಪ್ರತ್ಯೇಕವಾಗಿ ಪಹಣಿ ಪತ್ರಿಕೆಯಾಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ಮುಂದುವರೆದು 5 ಎಕರೆ 11 ಗುಂಟೆ ಎಂದು ನುಡಿಯುತ್ತಾರೆ. 2 ಎಕರೆ 30 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಈ ದಾವೆಯಲ್ಲಿ ಎದುರು ಕ್ಲೇಮು ಕೇಳಲು ಏನು ಸಮಸ್ಯೆ ಇತ್ತು ಎಂದರೆ ಸಾಕ್ಷಿಯು 11 ಎಕರೆ ನಮ್ಮ ಸ್ವಾಧಿನದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಚಕ್ಕಬಂದಿ ತಹಶೀಲ್ದಾರರಿಂದ ಪಡೆದಿರುತ್ತಿರಾ ಎಂದರೆ ಸಾಕ್ಷಿಯು 2 ಎಕರೆ 30 ಗುಂಟೆ ಪ್ರತ್ಯೇಕವಾಗದ ಕಾರಣ ಚಕ್ಕುಬಂದಿಯ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ. 11 ಎಕರೆ ಜಮೀನಿಗೆ ಸಂಬಂಧಿಸಿದಂತೆ ದುರಗಯ್ಯನಿಂದ ಬನ್ನೆಪ್ಪ ಪೂಜಾರಿ ಹಾಗೂ ಬನ್ನೆಪ್ಪ ಪೂಜಾರಿಯಿಂದ ನಿಂಗಪ್ಪ ಪೂಜಾರಿಗೆ ಖರೀದಿ ಪತ್ರ ಲಭ್ಯವಿಲ್ಲ ಎಂಬ ಬಗ್ಗೆ ನೊಂದಣಾಧಿಕಾರಿಯಿಂದ ಹಿಂಬರಹ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ನಮಗೆ ಸಿಕ್ಕಿರುವುದಿಲ್ಲ ಆದ್ದರಿಂದ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಸ.ನಂ: 165 ರ ಒಟ್ಟು ಚಕ್ಕಬಂದಿ ಏನೆಂದರೆ ಸಾಕ್ಷಿಯು ಪೂರ್ವಕ್ಕೆ ಸ.ನಂ: 166 ಮತ್ತು 167, ಉತ್ತರಕ್ಕೆ ದೊಡ್ಡಪ್ಪ ತಂದೆ ಬಾಲಪ್ಪನ ಜಮೀನು, ದಕ್ಷಿಣಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ಶಿವಬಸಮ್ಮ ಗಂಡ ಹನುಮಂತರಾಯ ರವರ ಜಮೀನು ಎಂದು ನುಡಿಯುತ್ತಾರೆ. ಸ.ನಂ: 165 ರಲ್ಲಿ ಹಿಸ್ಸೆಗಳು ಯಾವಾಗ ಕಾಲಕಾಲಕ್ಕೆ ಬದಲಾದವು ಎಂದರೆ ಸಾಕ್ಷಿಯು 1963 ರಲ್ಲಿ ಸರಕಾರದ ಆದೇಶದ ಮೇರೆಗೆ ಆಗಿರುತ್ತವೆ ನಂತರ 2014 ರಲ್ಲಿ ಹಿಸ್ಸೆಗಳು ವಾದಿಯರು ರದ್ದುಪಡಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಸರಕಾರದ ಗೆಜೆಟ್ ಅಧಿಸೂಚನೆ ನೋಡಿರುತ್ತಿರಾ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 2014 ರಲ್ಲಿ ಎಷ್ಟು ಹಿಸ್ಸೆಗಳು ಇದ್ದವು ಎಂದರೆ ಸಾಕ್ಷಿಯು 165/1 ಎ, 165/1 ಬಿ ಮತ್ತು 165/2 ಎ ಎಂದು ನುಡಿಯುತ್ತಾರೆ. ನಿಡಿ-24 ರಲ್ಲಿ ಯಾವ ಹಿಸ್ಸೆಯನ್ನು ರದ್ದುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಒಟ್ಟು ಜಮೀನಿನ ಹಿಸ್ಸೆಗಳನ್ನು ರದ್ದುಪಡಿಸಿ 1, 2, 3 ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-4 ರಲ್ಲಿ 8 ಎಕೆರೆ ಇರುವುದನ್ನು ರೌಂಡ ಮಾಡಿ 11 ಎಕರೆ ಎಂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಸರಕಾರ ಆದೇಶ ಮಾಡಿದ ಬಗ್ಗೆ ಉಲ್ಲೇಖವಿದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಬನ್ನೆಪ್ಪ ತಂದೆ ನಿಂಗಪ್ಪ ರಜಿಸ್ಟ್ರಿದಾರ ಎಂದು ಬರೆದಿದೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ನಿಮ್ಮ ಹಿರಿಯರಾಗಲಿ ಅಥವಾ ನೀವಾಗಲಿ ದಾವಾ ಆಸ್ತಿಯಲ್ಲಿ ಹದ್ದಬಸ್ತ, ಆಕಾರಬಂದ, ಟಿಪ್ಪಣೆ ಮಾಡಲು ಮತ್ತು ಅಳತೆ ಮಾಡಲು

ಅರ್ಜಿ ಸಲ್ಲಿಸಿದ್ದರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-5 ರಲ್ಲಿನ ಕ್ರಮಸಂಖ್ಯೆ 1 ರಲ್ಲಿನ ಅಂಶಗಳು ಓದಿ ಹೇಳಲಾಗಿ ಸಾಕ್ಷಿಯು ಅವರದ್ದು 18 ಎಕರೆ 13 ಗುಂಟೆ ಇದೆ ಎಂದು, ನಮ್ಮದು 11 ಎಕರೆ 5 ಗುಂಟೆ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-10 ರ ಉತ್ತರಕ್ಕೆ 21.4 ಹಾಗೂ ದಕ್ಷಿಣಕ್ಕೆ ಹಿಸ್ಸಾ-2 8.14 ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಅದು ತಪ್ಪಾಗಿದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಸರಿಯಾದ ಹಿಸ್ಸೆ ನಕಾಶೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸ.ನಂ: 165 ರಲ್ಲಿನ 11 ಎಕರೆ 5 ಗುಂಟೆ ಹಾಗೂ 18 ಗುಂಟೆ 13 ಗುಂಟೆಗೆ ಸಂಬಂಧಿಸಿದಂತೆ ಹಿಸ್ಸಾ ನಕಾಶೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಿಲ್ಲ. 2014 ಕ್ಕಿಂತ ಮುಂಚೆ ಪೋಡಿ ಹಾಗೂ ಟಿಪ್ಪಣಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರಕಾರ 2014 ರಲ್ಲಿ ಯಾವುದೇ ಪೋಡಿ ಹಾಗೂ ಟಿಪ್ಪಣಿ ಕಾರ್ಯವನ್ನು ಕೈಗೊಂಡಿರುವುದಿಲ್ಲ ಎಂದರೆ ಸಾಕ್ಷಿಯು ವಾದಿಯರು ಸ್ವತ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಸ.ನಂ: 165 ರ 2 ಎಕರೆ 30 ಗುಂಟೆ ಕಡಿಮೆಯಾದ ಬಗ್ಗೆ ತಹಶೀಲ್ದಾರರಿಗಾಗಲಿ ಅಥವಾ ಉಪವಿಭಾಗ ಅಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿ ಸರಿಪಡಿಸಲು ಕೇಳಿರುತ್ತಿರಾ ಎಂದರೆ ಸಾಕ್ಷಿಯು ಜಿಲ್ಲಾಧಿಕಾರಿಗೆ ಒತ್ತುವರಿಯಾದ ಜಮೀನು ಮರಳಿ ಕೊಡಿಸುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಜಿಲ್ಲಾಧಿಕಾರಿ ನಂತರ ತಹಶೀಲ್ದಾರರವರಿಗೆ ಹಾಗೂ ಪೊಲೀಸರಿಗೆ ಸರಿಪಡಿಸಲು ನಿರ್ದೆಶಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ಒತ್ತುವರಿ ಮಾಡಿದ ಬಗ್ಗೆ ಅವರಿಗೆ ನೋಟಿಸ ನೀಡಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾವೆ ಹೂಡಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಆದರೆ ಅಂಗವಿಕಲ ಆಯೋಗಕ್ಕೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆಯೋಗದವರು ಒತ್ತುವರಿಯಾದ ಬಗ್ಗೆ ನಿರ್ಣಯಿಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಜಿಲ್ಲಾಧಿಕಾರಿಯವರು ತಹಶೀಲ್ದಾರರಿಗೆ ಅಥವಾ ಪೊಲೀಸ ಇಲಾಖೆಗೆ ಸಲ್ಲಿಸಿದ ಪ್ರತಿಯನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ತಹಶೀಲ್ದಾರ ಹಾಗೂ ಪೊಲೀಸರು ಯಾರು ಇದ್ದರು ಎಂದರೆ ಸಾಕ್ಷಿಯು ತಹಶೀಲ್ದಾರ ಶಿವಾನಂದ ಸಾಗರ ಹಾಗೂ ಗುರುರಾಜ ಕಟ್ಟಿಮನಿ ಎನ್ನುವ ಪಿ.ಎಸ್.ಐ ರವರು ಜಮೀನಿಗೆ ಬಂದು ಒತ್ತುವರಿ ಜಾಗವನ್ನು ಬಿಡಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನ್ಯಾಯಾಲಯದಿಂದ ಆದೇಶ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ **ಸದರಿ ತಹಶೀಲ್ದಾರರ ಹಾಗೂ ಪಿ.ಎಸ್.ಐ ರವರನ್ನು ಸಾಕ್ಷಿ ಮಾಡಿಸಲು ನಿಮಗೆ ಯಾವುದೇ ತೊಂದರೆಇಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆದರೆ ಸದರಿ ಸಾಕ್ಷಿದಾರರು ಜಿಲ್ಲಾಧಿಕಾರಿಯ ಆದೇಶ ಪಾಲಿಸಿರುವದರಿಂದ ಅವರ ಸಾಕ್ಷ್ಯ ಅವಶ್ಯಕತೆ ಇರುವುದಿಲ್ಲ ಎಂದು ಪ್ರಶ್ನೆಯನ್ನು ತಿರಸ್ಕರಿಸಲಾಯಿತು.** ಅಂಗವೀಕಲರ ಆಯೋಗದ ಆದೇಶವನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಗೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ದುರಗಪ್ಪನಿಂದ ಬನ್ನಯ್ಯನಿಗೆ ಬಂದ ಬಗ್ಗೆ ತಮ್ಮ ಬಳಿ ಆದೇಶ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪೂರ್ವಜರು ಖರೀದಿ ಮಾಡಿದ ಬಗ್ಗೆ ಚಕ್ಕಬಂದಿ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹಿರಿಯರು ವಾದಿಯರಿಂದ ಇದೇ ಸರ್ವೆ ನಂಬರನಲ್ಲಿ ಹೊರತುಪಡಿಸಿ ಬೇರೆ ಜಮೀನು ಖರೀದಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ. ನೀವಾಗಲಿ, ನಿಮ್ಮ ಹಿರಿಯರಾಗಲಿ ವಾದಿಯರಿಂದ 2 ಎಕರೆ 30 ಗುಂಟೆ ಜಮೀನು ಯಾವತ್ತಿಗೂ ಖರೀದಿಸಿರುವುದಿಲ್ಲ ಮತ್ತು ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು 11 ಎಕರೆ 5 ಗುಂಟೆ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ 2 ಎಕರೆ 30 ಗುಂಟೆ ಪ್ರತ್ಯೇಕ ಜಮೀನು

ಇರುವ ಬಗ್ಗೆ ಉದ್ಭವಿಸುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ನಿಮ್ಮ ಹಿರಿಯರು ಖರೀದಿಸುವ ಮುಂಚೆ 164 ರ ದಕ್ಷಿಣ ದಿಕ್ಕಿನಿಂದ ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ.ನಂ: 167/1 ಬಿ ಯ ದಕ್ಷಿಣಕ್ಕೆ ಹಾಗೂ ಉತ್ತರಕ್ಕೆ ಇರುವ ಬಂಡಿ ರಸ್ತೆಗೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನಂತರ ನೀವು ವಾದಿಯರು ಆ ಕಡೆಯಿಂದ ಓಡಾಡಲು ಬಂದ್ ಮಾಡಿರುತ್ತಿರಿ ಎಂದರೆ ಸರಿಯಲ್ಲ. ಆದ್ದರಿಂದ ನಿಮ್ಮ ಜಮೀನಿನ ಪಶ್ಚಿಮಕ್ಕೆ ತಲೆ ತಲಾಂತರದಿಂದ ಹಾದಾಡುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ವಾದಿಯರ ಜಮೀನಿನಲ್ಲಿ 2 ಎಕರೆ 30 ಗುಂಟೆ ಹೆಚ್ಚಾದ ಬಳಿಕ ಸದರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಸದರಿ ರಸ್ತೆ ಬಂದ್ ಮಾಡಿರುತ್ತಿರಿ ಎಂದರೆ ಸರಿಯಲ್ಲ. ಸ.ನಂ: 165 ರಲ್ಲಿನ ರಸ್ತೆ ಹೊರತುಪಡಿಸಿ ಬೇರೆ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಕೂಡ ವಾದಿ ನಂ: 1 ರಿಂದ 6 ರವರಿಗೆ ರಸ್ತೆಯ ಬಳಕೆ ಮಾಡಬಾರದೆಂಬ ಉದ್ದೇಶದಿಂದ ಮತ್ತು ಅವರ ಕೃಷಿ ಕಾರ್ಯಗಳಿಗೆ ಅನಾನುಕೂಲ ಮಾಡುವ ಸಲುವಾಗಿ ಸದರಿ ರಸ್ತೆ ಮುಚ್ಚಿರುತ್ತಿರಿ ಎಂದರೆ ಸರಿಯಲ್ಲ. ನೀವು ನಿಮ್ಮ ಪ್ರತಿವಾದ ಪತ್ರದೊಂದಿಗೆ ಹಾಜರುಪಡಿಸಿದ ನಕಾಶೆ 2 ಎಕರೆ 30 ಗುಂಟೆಗೆ ಮಾತ್ರ ಇದ್ದು ಮತ್ತು ಅದು ಕೂಡ ತಪ್ಪಾಗಿದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಇಲ್ಲ ಎಂದು ತೋರಿಸಲು ಯಾವುದಾದರು ನಕಾಶೆಯನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿನ ಒಕ್ಕಣೆಯನ್ನು ಓದಿ ಹೇಳಲಾಗಿ ಸಾಕ್ಷಿಯು ತಪ್ಪಾಗಿದೆ ಎಂದು ನುಡಿಯುತ್ತಾರೆ. ಸ.ನಂ: 165 ಅಳತೆ ಮಾಡಲು ಬಂದಾಗ ನೀವು ಹಾಜರಿದ್ದಿರಾ ಎಂದರೆ ಸಾಕ್ಷಿಯು ಒತ್ತುವರಿ ಮಾಡಿದಾಗ ಅಳತೆ ಮಾಡಿದಾಗ ನಾನು ಇರಲಿಲ್ಲ, ಒತ್ತುವರಿ ತೆರವುಗೊಳಿಸಿ ಅಳತೆ ಮಾಡಿದಾಗ ನಾನು ಇದ್ದೆ ಎಂದು ನುಡಿಯುತ್ತಾರೆ. ಸದರಿ ತೆರವುಗೊಳಿಸಿದಾಗ ಪಂಚನಾಮೆ ಬರೆದಿರುತ್ತಾರಾ ಎಂದರೆ ಸಾಕ್ಷಿಯು ದಿನಾಂಕ:17-05-2016 ರಂದು ಬರೆದಿರುತ್ತಾರೆಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಯಾರು ಮತ್ತು ಎಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಜಮೀನಿನಲ್ಲಿ ಸರ್ವೆಯರ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಪಂಚರು ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ಅಯ್ಯಪ್ಪ ಹಾಗೂ ಹುಲ್ಲಪ್ಪ ಇದ್ದರು ಎಂದು ನುಡಿಯುತ್ತಾರೆ. ಸದರಿ ದಿನದಂದು ಸಂಪೂರ್ಣ ಜಮೀನು ಅಳತೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು 2 ಎಕರೆ 30 ಗುಂಟೆ ಒತ್ತುವರಿ ತೆರವು ಮಾಡಿಸಿ, 11 ಎಕರೆ 5 ಗುಂಟೆ ಸ್ವಾಧಿನಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಮಗೆ ಸಂಗಣ್ಣ ಮೇಟಿ ಬಹಳ ಆತ್ಮಿಯರಿದ್ದರು ಎಂದರೆ ಸರಿಯಲ್ಲ. ಅವರು ಭೂಮಾಪನ ಇಲಾಖೆಯಲ್ಲಿ ಬಹಳ ಅನುಭವ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ವಾದಿಯರಿಗೆ ಸಂಬಂಧಿಸಿದ್ದರು ಕೂಡ ಸದರ ಸಂಗಣ್ಣ ಮೇಟಿಯವರ ಸಹಾಯ ಪಡೆದು ನಿಮ್ಮ ಹೆಸರಿಗೆ ಮಾಡಿಕೊಂಡು ವಾದಿಯರಿಗೆ ಮೋಸಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಫಾರಂ ನಂ: 10 ರಲ್ಲಿ ಖಾರಖು ತಪ್ಪಾಗಿ ಬರೆದಿರುವುದರಿಂದ ನಿಮ್ಮ ಜಮೀನು 11 ಎಕರೆ 5 ಗುಂಟೆ ಜಮೀನು ಸಾದಿಸುತ್ತಿದ್ದಿರಿ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು 11 ಎಕರೆ 5 ಗುಂಟೆಯಲ್ಲಿ ಯಾವ ಭಾಗದಲ್ಲಿ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು 9 ಎಕರೆ 5 ಗುಂಟೆ ತನ್ನ ಹೆಸರಿಗೆ 1 ಎಕರೆ 3 ನೇ ಪ್ರತಿವಾದಿ, ಇನ್ನುಳಿದ 1 ಎಕರೆ 2 ನೇ ಪ್ರತಿವಾದಿಯರು ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಯಾವ ಭಾಗದಲ್ಲಿ ನೀವು ಹಾಗೂ 2 ಮತ್ತು 3 ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು 2 ಮತ್ತು 3 ನೇ ಪ್ರತಿವಾದಿಯರು ಮಧ್ಯ ಭಾಗದಲ್ಲಿ ನಾನು ಎರಡುಕಡೆ ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ಜಮೀನುಗಳು ಹಿಸ್ಸೆ ಏನು ಎಂದರೆ ಸಾಕ್ಷಿಯು ಹಿಸ್ಸೆಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಅದರಂತೆ ದಾಖಲೆ ತೋರಿಸಲು

ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸ.ನಂ: 165 ರಲ್ಲಿ ಮೂಲತ 4 ಹಿಸ್ಸೆಗಳು ಇದ್ದವು ಎಂದರೆ ಸರಿಯಲ್ಲ. ಅದರಂತೆ ದಕ್ಷಿಣಕ್ಕೆ ಹಿಸ್ಸಾ -3 ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. 8 ಎಕರೆ ಉತ್ತರದಿಕ್ಕಿಗೆ ಬದು ಇದೆ ಎಂದರೆ ಸರಿಯಲ್ಲ. ಅದರಂತೆ ಬೇರೆ ಬೇರೆ ಜಾತಿಯ ಮರಗಳು ಇದ್ದವು ಎಂದರೆ ಸರಿಯಲ್ಲ. ನಿಮ್ಮ ಪೂರ್ವಿಕರು ಖರೀದಿಸಿದ ಜಮೀನು ಹೊರತುಪಡಿಸಿ ಉಳಿದ ಜಮೀನಿಗೆ ನೀವು ಮಾಲಿಕರು ಅಲ್ಲ, ಕಬ್ಜೆದಾರರು ಅಲ್ಲ ಎಂದರೆ ಸಾಕ್ಷಿಯು 11 ಎಕರೆ 5 ಗುಂಟೆ ಜಮೀನು ನಮ್ಮ ಮಾಲಿಕತ್ವ ಹಾಗೂ ಕಬ್ಜೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ.

**ನ್ಯಾಯಾಲಯದ ಬೆಳಿಗ್ಗೆಯ ಸಮಯ ಮುಗಿದಿರುವುದರಿಂದ ಪಾಟೀ ಸವಾಲು ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

**ಮುಂದುವರೆದ ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ**

ವಾದಿಯರ ಪೂರ್ವಜರಿಂದಲೂ ವಾದಿಯರ ಜಮೀನಿನ ಉತ್ತರಕ್ಕೆ ಬದು ಇತ್ತು ಮತ್ತು ಈಗಲೂ ಇದೆ ಎಂದರೆ ಸರಿಯಲ್ಲ. ದಾವಾ ಜಮೀನು ಒತ್ತುವರಿಯಾದ ಬಗ್ಗೆ ನಿಮಗೂ ಮತ್ತು ವಾದಿಯರಿಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ನಮಗೆ 2015 ರಲ್ಲಿ ಗೊತ್ತಾಗಿದೆ ಮತ್ತು ಅವರಿಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2015 ರಲ್ಲಿ ವಾದಿಯರೇ ಒತ್ತುವರಿಯಾದ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯರ ನಕ್ಷೆ ಮಾಡಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಯಾವ ನಕ್ಷೆ ಮಾಡಿಸಿದರು ಎಂದರೆ ಸಾಕ್ಷಿಯು ಒತ್ತುವರಿ ಮಾಡಿ ನಕ್ಷೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ: 165 ರಲ್ಲಿ ನಿಮ್ಮ ಮತ್ತು ವಾದಿಯರ ಹಿಸ್ಸೆಗಳು ಯಾವುವು ಎಂದರೆ ಸಾಕ್ಷಿಯು ಸ.ನಂ: 165/1 ದೇವಣ್ಣ ಮತ್ತು ಗಂಗಾಧರ ತಂದೆ ಯಮನಪ್ಪರದ್ದು , ಸ.ನಂ: 165/2 ಸಂಗಮ್ಮ ಗಂಡ ಕಾಳಪ್ಪರವರದ್ದು ಮತ್ತು ಸ.ನಂ: 165/3 ನಮ್ಮದು ಎಂದು ನುಡಿಯುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ನಿಮಗೆ ಯಾವ ಸರ್ವೆ ನಂಬರ ಬಂದಿದೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಸ.ನಂ: 165/3 ರಲ್ಲಿ 8 ಎಕರೆ ಜಮೀನನ್ನು ಫಾರಂ ನಂ:10 ರಲ್ಲಿ 11 ಎಕರೆ 5 ಗುಂಟೆ ಎಂದು ತಪ್ಪಾಗಿ ನಮೂದಾಗಿದ್ದನ್ನು ದುರುಪಯೋಗಪಡಿಸಿಕೊಂಡು 11 ಎಕರೆ 5 ಗುಂಟೆಗೆ ನೀವು ಮಾಲಿಕರೆಂದು ಕ್ಲೇಮು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು ನಿಮ್ಮ ಅಂಗವೀಕಲತೆಯನ್ನು ಹಾಗೂ ರಾಜಕೀಯ ಪ್ರಾಬಲ್ಯವನ್ನು ದುರುಪಯೋಗಪಡಿಸಿಕೊಂಡು 2 ಎಕರೆ 30 ಗುಂಟೆ ಜಮೀನನ್ನು ನಿಮ್ಮದಾಗಿಸಿಕೊಳ್ಳುವ ಹುನ್ನಾರ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು ಅಳತೆಗಾಗಿ ಸಲ್ಲಿಸಿದ ಅರ್ಜಿಗೆ ವಾದಿಯರು ತಕರಾರು ಮಾಡಿದ್ದರು ಕೂಡ ಅಧಿಕಾರಿಗಳೊಂದಿಗೆ ಶಾಮಿಲಾಗಿ ವಾದಿಯರನ್ನು ವಿಚಾರಿಸದೆ ತಪ್ಪಾಗಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಬಳಿ 11 ಎಕರೆ 5 ಗುಂಟೆ ಜಮೀನಿನ ಖರೀದಿ ಪತ್ರ ತಮ್ಮ ಬಳಿ ಅಥವಾ ತಮ್ಮ ಪೂರ್ವಿಕರ ಬಳಿ ಇರದೆ ಇದ್ದರೂ ಸಹಿತ 11 ಎಕರೆ 5 ಗುಂಟೆ ಜಮೀನು ನಿಮ್ಮದು ಎಂದು ಸುಳ್ಳು ಪ್ರತಿಪಾದಿಸುತಿದ್ದಿರಿ ಎಂದರೆ ಸರಿಯಲ್ಲ. ಸದರಿ 11 ಎಕರೆ 5 ಗುಂಟೆ ಜಮೀನಿನ ಶಿರೋನಾಮೆ ಪತ್ರಗಳು ಇದ್ದರೂ ಕೂಡ ಇಲಾಖೆಗಳಲ್ಲಿ ಹುಡುಕಾಡಿದ್ದೇನೆ ಅವುಗಳು ಸಿಕ್ಕಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇವಲ ಪಹಣಿ ಪತ್ರಿಕೆಯಲ್ಲಿ 11 ಎಕರೆ 5 ಗುಂಟೆ ನಮೂದಾಗಿದ್ದನ್ನು ದುರುಪಯೋಗಪಡಿಸಿಕೊಂಡು ಮಾಲಿಕರೆಂದು ಪ್ರತಿಪಾದಿಸುತ್ತಿದ್ದಿರಿ ಎಂದರೆ ಸರಿಯಲ್ಲ. ವಾದಿಯರು

ಹಿಂದಿನಿಂದಲೂ 21 ಎಕರೆ 14 ಗುಂಟೆ ಜಮೀನಿನಲ್ಲಿ ಸ್ವಾಧಿನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಆದರಂತೆ ನೀವು 11 ಎಕರೆ 5 ಗುಂಟೆ ಜಮೀನಿನ ಮಾಲೀಕತ್ವ ಹಾಗೂ ಸ್ವಾಧಿನತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮನೆಯ ಅಥವಾ ವಾದಿಯರ ಮನೆತನದವರಿಗೆ 2014 ರಲ್ಲಿ ನೀವು ಪ್ರತಿಪಾದಿಸುತ್ತಿರುವ ಹೆಚ್ಚುವರಿ ಭೂಮಿಯ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಕಂದಾಯ ಅಧಿಕಾರಿಗಳ ಸಹಾಯ ತೆಗೆದುಕೊಂಡು ಯಾವುದೇ ಶಿರೋನಾಮೆಯ ದಾಖಲೆಗಳಿಲ್ಲದೆ 11 ಎಕರೆ 5 ಗುಂಟೆಗೆ ಮಾಲೀಕರು ಎಂದು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ನಿಮ್ಮ ಜಮೀನಿನ ಮೂಲಕ ತಮ್ಮ ಜಮೀನಿಗೆ ಹೋಗುತ್ತಾರೆ ಅದೇ ದಾರಿಯಲ್ಲಿಯೆ ವಾದಿಯರು ಕೂಡ ಹೋಗುತ್ತಾರೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಎತ್ತಿ ಹಾಕಬೇಕೆನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.